865

ಮೈಸೂರ ಗೆಜಿಟ್.

ನಂ. 43 ಸರ್ಕಾರದಿಂದ ಪಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 25, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ತಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತಿ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡಿ|| ಕಮ್ಮಿಷನರ್ ವ ಫಾರೆಸ್ಟು ಆಫೀಸರ್ ಗಳಿಂದ ನಡಿಸಲ್ಪಡುತ್ತೆ;—

	ಸ್ವಲ್ಪ ಹೆಚ್ಚುಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಣ ತಾರೀಖು 1ನೇ ಡಿಶಂಬರ್ 1884	.. 500
ಹುಣಸೂರು ತಾರೀಖು 4ನೇ ಡಿಟೋ ,,	
ಬೆಂಗಳೂರು ತಾರೀಖು 8ನೇ ಡಿಟೋ ,,	.. 280
ಸೊರಬ ತಾರೀಖು 13ನೇ ಡಿಟೋ ,,	.. 200
ಅನಂತಪುರ ತಾರೀಖು 18ನೇ ಡಿಟೋ ,,	.. 200
ಶಿವಮೊಗ್ಗ ತಾಖು 22ನೇ ಡಿಟೋ ,,	.. 500
ತೀರ್ಥಹಳ್ಳಿ ತಾರೀಖು 7ನೇ ಜನವರೀ 1885	.. 200
ಚಿಕ್ಕಮಗಳೂರು ತಾ|| 14ನೇ ಡಿಟೋ ,,	.. 200
ಹಾಸನ ತಾರೀಖು 21ನೇ ಡಿಟೋ ,,	.. 400

ಹರಾಜಿನ ಷರತ್ತುಗಳು.—ಸ್ ೧೮೭೪ನೇ ಇಸವಿ ಡಿಸೆಂಬರ್ 5ನೇ ಮತ್ತು ಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘೋಷಿಸ್ಪಾ ಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ವೇದಲ್ಪಡವೆವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಗೆ ನಾಯಿದೆಯು, 1885ನೇ ಇಸವೀ ಮಾರ್ಚಿ 25ನೇ ತಾರೀಖಿಗೆ ಆಖೈರಾಗುವದು.

ಮೊಕ್ಕಾಂ ಮೈಸೂರು, ತಾರೀಖು 21ನೇ ಅಕ್ಟೋಬರ್ 1884.

ನಂ. 151.—ಹಾಸನದ ಅಮಲ್ದಾರ್ ಖಾದರ್‌ಅಲ್ಲೀಯವರಿಗೆ ನೂಹೆ ಮಜಕೂರು 6ನೇ ಮತ್ತು ಂ 143ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 24ನೇ ಅಕ್ಟೋಬರ್ 1884.

ನಂ. 152.—ಶ್ರೀಮಂ ಮಹಾರಾಜ ರಾಜಾಸಾಹೇಬ್ ಬಹದೂರವರು ಇದರಡೀ ಕಂಡ ಹೊಕರರಾತಿಗಳನ್ನು ಹುಕುಂ ಮಾಡಿರುತ್ತಾರೆ:—

ಅಮೃತಮಹಲ್ ಇಲಾಖಾ ಇರ್ಚಾರ್ಜ್ ಆಫೀಸರ್ ಕರ್ನಲ್ ಯೆ. ಸಿ. ಹೇ ಯವರು, ಶ್ರೀಮಂ ಮಹಾರಾಜರವರ ಮಿಲಿಟೆರಿ ಸೆಕ್ರೆಟೆರಿಯರಾಗಿಯೂ ಮೈಸೂರು ಫೂಜಿನ ಕಮ್ಯಾಂಡೆಂಟರಾಗಿಯೂ ಇರತಕ್ಕದ್ದು.

ಫರ್ಸ್ಟ್ ಮದರಾಸ್ ಲೈಟ್ ಕ್ಯಾವಲ್ರೀಗೆ ಕೀಂದ ಲೆಫ್‌ಟೆನೆಂಟ್ ಆರ್. ಜಿ. ಜೋನ್ಸ್ ಯವರು, ಮೈಸೂರು ಫೂಜಿನ ಸ್ಟ್ಯಾಫ್ ಆಫೀಸರರಾಗಿರತಕ್ಕದ್ದು.

ನಂ. 153.—ನಾಲ್ಕನೇ ಗ್ರೇಡ್ ಅಮಲ್ದಾರ್ ಬಿ. ಗೋಪಾಲಯ್ಯಂಗಾರ್ರು, ಅಮೃತಮಹಲ್ ಇಲಾಖಾ ಇರ್ಚಾರ್ಜ್ ಆಫೀಸರರಿಗೆ ಅಸಿಸ್ಟೆಂಟರಾಗಿರತಕ್ಕದ್ದು.

ನಂ. 154.—ಇದರಡೀ ಕಂಡ ಹೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ಮೆ॥ ಪಿ. ಯಸ್. ಅಚ್ಚುತರಾವ್, ಯಲ್. ಎಂ. ಯಸ್. ಯವರು, 1884ನೇ ಇಸವಿ ಏಪ್ರಲ್ 1ನೇ ಮತ್ತು ಂ ಲಾಗಾಯತು 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿಯರ್ರಾಗಿರತಕ್ಕದ್ದು.

ಮೆ॥ ಎ. ಆರ್. ವೈದ್ಯನಾಥಶಾಸ್ತ್ರಿ ಬಿ. ಎ., ಯಂ. ಬಿ., ಸಿ. ಯಂ. ಯವರು, 1884ನೇ ಇಸವಿ ಸೆಪ್ಟೆಂಬರ್ 5ನೇ ಮತ್ತು ಂ ಲಾಗಾಯತು 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿಯರ್ರಾಗಿರತಕ್ಕದ್ದು.

ಮೆ॥ ಪಿ. ರಾಮಾನುಜಲುನಾಯಿಡು ಎಲ್. ಯಂ. ಎಸ್. ಯವರು, ಕೆಲಸದ ಮೇಲೆ ಬಂದ ಲಾಗಾಯತು 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿಯರ್ರಾಗಿರತಕ್ಕದ್ದು.

ನಂ. 155.—ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಇರ್ಸರ್‌ವೇಟರ್ ಮೆ॥ ಸಿ. ನಾರಾಯಣರಾಯರು, 1884ನೇ ಇಸವಿ ಅಕ್ಟೋಬರ್ 20ನೇ ಮತ್ತು ಮಿನ ಮಧ್ಯಾನ್ಹಾತ್ಪರದಲ್ಲಿ ಅಸಿಸ್ಟೆಂಟ್ ಇರ್ಸರ್‌ವೇಟರ್ ಆಫೀಸ್ ಚಾರ್ಜನ್ನು ಫಾರೆಸ್ಟ್ ಅರ್ಸೆಟಿಸ್ ಮೆ॥ ಎಸ್. ಏ. ಬಾವೂರಾಯರಿಗೆ ಒಪ್ಪಿಸಿರುತ್ತಾರೆ.

ಬಮೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಸೆಕ್ರೆಟೇರಿ.

ಮಿಲಿಟೇರಿ ಇಲಾಖಾ.

ತಾರೀಖು 1ನೇ ಸೆಪ್ಟೆಂಬರ್ 1884.

ಮೈಸೂರು ಪೈದಲ್ ಫೂಜಿನಲ್ಲಿ ಇದರಡೀ ಕಂಡ ಬಡ್ತಿಗಳು ಮಾಹೆ ಮಜಕೂರು 1ನೇ ಮತ್ತು ಂ ಲಾಗಾಯತು ಮಾಡಲ್ಪಟ್ಟಿರುತವೆ:—
3ನೇ ಪಟಾಲಮಿನಲ್ಲಿ 2ನೇ ಕ್ಲಾಸ್ ಸುಬೇದಾರ್ ಮಹಮ್ಮದ್‌ಗೌಸರು, ಅದೇ ಪಟಾಲಂ 1ನೇ ಕ್ಲಾಸ್ ಸುಬೇದಾರರಾಗಿರತಕ್ಕದ್ದು.
3ನೇ ಪಟಾಲಮಿನ 2ನೇ ಕ್ಲಾಸ್ ಸುಬೇದಾರ್ ಮಾಳಿಗೆ ನಾಯಕರು, ಅದೇ ಪಟಾಲಂ 1ನೇ ಕ್ಲಾಸ್ ಸುಬೇದಾರರಾಗಿರತಕ್ಕದ್ದು.

ಯೆ. ಸಿ. ಹೇ, ಕರ್ನಲ್,
ಅ॥ ಮಿಲಿಟೆರಿ ಸಿಕ್ರೆಟೇರಿ.